# ಮಾನ್ವಿ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್ ನಿ.,

MPS BANK

ಪ್ರಧಾನ ಕಛೇರಿ : ಅಪರ್ಣ ಚಿತ್ರಮಂದಿರ ಕಾಂಪ್ಲೆಕ್ಸ್, ಮಾನ್ವಿ - 584 123 ಜಿ॥ ರಾಯಚೂರು

## 31ನೇ ವಾರ್ಷಿಕ ಮಹಾಸಭೆ ಸೇರುವ ಕುರಿತು

(ಸೌಹಾರ್ದ ಸಹಕಾರಿ ಕಾಯ್ದೆ ಅಡಿಯಲ್ಲಿ 26 ನೇ ಸಭೆ)

**24-09-2026** | **ವಾರ್ಷಿಕ ಮಹಾಸಭೆ ನೋಟೀಸು** | ಆರ್.ಸುಭದ್ರಮ್ಮ ವಿರೋಬ ಶೆಟ್ಟಿ ಪದವಿ ಕಾಲೇಜು, ಮಾನವಿ

ಮಾನ್ಯ ಸದಸ್ಯರೇ,

ಸನ್ 2025-26 ನೇ ಸಾಲಿನ ಬ್ಯಾಂಕಿನ ವಾರ್ಷಿಕ ಮಹಾಸಭೆಯನ್ನು ದಿನಾಂಕ:- **24.09.2026 ರಂದು ಗುರುವಾರ ಮುಂಜಾನೆ 11.30 ಗಂಟೆಗೆ ಆರ್.ಸುಭದ್ರಮ್ಮ ವಿರೋಬ ಶೆಟ್ಟಿ ಪದವಿ ಕಾಲೇಜು, ಆರ್.ಜಿ.ಕ್ಯಾಂಪ್ ರಸ್ತೆ, ಸಾಯಿಬಾಬ ದೇವಸ್ಥಾನದ ಹತ್ತಿರ, ಮಾನವಿ -584123 ಯಲ್ಲಿ** ಬ್ಯಾಂಕಿನ ಅಧ್ಯಕ್ಷರಾದ **ಶ್ರೀ ಆರ್.ತಿಮ್ಮಯ್ಯ ಶೆಟ್ಟಿ** ಇವರ ಅಧ್ಯಕ್ಷತೆಯಲ್ಲಿ ಕರೆಯುವದಾಗಿ ನಿರ್ದೇಶಕ ಮಂಡಳ ಸಭೆಯಲ್ಲಿ ನಿರ್ಧರಿಸಲಾಗಿದ್ದು ಮಾನ್ಯ ಸದಸ್ಯರೆಲ್ಲರೂ ಆ ದಿನ ಸರಿಯಾದ ವೇಳೆಗೆ ತಪ್ಪದೆ ಆಗಮಿಸಿ, ಈ ಸಭೆಯಲ್ಲಿ ಮಂಡಿಸಿದ ಎಲ್ಲಾ ವಿಷಯಗಳನ್ನು ಚರ್ಚಿಸಿ ಸೂಕ್ತ ನಿರ್ಣಯಗಳನ್ನು ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ವಿನಂತಿ.

### ಸಭೆಯಲ್ಲಿ ಚರ್ಚಿಸಬೇಕಾದ ವಿಷಯಗಳು

1. 31 ನೇ ಸರ್ವ ಸದಸ್ಯರ ಮಹಾ ಸಭೆ ನೋಟೀಸ್‌ನ್ನು ಓದಿ ದಾಖಲು ಮಾಡುವುದು.
2. ಹಿಂದಿನ ದಿನಾಂಕ 17.08.2025 ರಂದು ನಡೆದ ವಾರ್ಷಿಕ ಮಹಾಸಭೆಯ ಗೊತ್ತುವಳಿಗಳನ್ನು ಓದಿ ದೃಢೀಕರಿಸುವ ಬಗ್ಗೆ.
3. ಮಂಡಳಿಯು ಸಲ್ಲಿಸಿದ ವಾರ್ಷಿಕ ವರದಿಯ ಪರಿಗಣನೆ.
4. ಲೆಕ್ಕ ಪರಿಶೋಧಕರು ಮತ್ತು ಆಂತರಿಕ ಲೆಕ್ಕ ಪರಿಶೋಧಕರ ನೇಮಕ ಹಾಗೂ ಅವರಿಗೆ ಕೊಡಬಹುದಾದ ಸಂಭಾವನೆಯ ನಿರ್ಧಾರಣೆ.
5. ಲೆಕ್ಕ ಪರಿಶೋಧಕರ ವರದಿ ಮತ್ತು ಲೆಕ್ಕ ಪರಿಶೋಧಿತ ತಖ್ತೆಗಳ ಪರಿಗಣನೆ.
6. ಲೆಕ್ಕ ಪರಿಶೋಧನಾ ವರದಿಗೆ ಸಲ್ಲಿಸಲಾದ ಅನುಪಾಲನಾ ವರದಿಯ ಪರಿಗಣನೆ.
7. ನಿವ್ವಳ ಲಾಭವನ್ನು ವಿಲೇವಾರಿ ಮಾಡುವುದು.
8. ಕಾರ್ಯಾಚರಣೆಯ ಕೊರತೆ ಏನಾದರು ಇದ್ದಲ್ಲಿ ಅದರ ಪುನರಾವಲೋಕನ.
9. ದೀರ್ಘಾವಧಿ ಯೋಜನೆ ಮತ್ತು ವಾರ್ಷಿಕ ಕಾರ್ಯಾಚರಣೆ ಯೋಜನೆ, ಅನುಮೋದನೆ.
10. 2026-27 ನೇ ಸಾಲಿನ ವಾರ್ಷಿಕ ಬಜೆಟ್‌ನ ಅನುಮೋದನೆ.
11. ಉಪ ವಿಧಿಗಳಲ್ಲಿ ನಿರ್ದಿಷ್ಟ ಪಡಿಸಿದಂತೆ ನಿರ್ದಿಷ್ಟ ಮೀಸಲು ಮತ್ತು ಇತರೆ ನಿಧಿಗಳ ಸೃಜನೆ.
12. ಮೀಸಲು ಮತ್ತು ಇತರ ನಿಧಿಗಳ ವಾಸ್ತವಿಕ ಬಳಕೆಯ ಪುನರಾವಲೋಕನ.
13. ಮಂಡಳಿ ಸದಸ್ಯರಿಂದ ಸಹಕಾರಿಯ ಸೇವೆಗಳ ಉಪಯೋಗದ ಅವಲೋಕನ.
14. ನಿರ್ದೇಶಕ ಮತ್ತು ಅವರ ಸಂಬಂಧಿಗೆ ನೀಡಿದ ಸಾಲದ, ಸುಸ್ತಿ ಸಾಲದ ಮತ್ತು ವಸೂಲಿ ಕ್ರಮದ ಪರಿಶೀಲನೆ.
15. ಒಟ್ಟುಗೂಡಿಸುವಿಕೆ, ವಿಭಜನೆ, ವಿಲೀನತೆ ಮತ್ತು ಸ್ವತ್ತುಗಳ, ಹೊಣೆಗಾರಿಕೆಗಳ ವರ್ಗಾವಣೆ.
16. ಮಂಡಳಿಯ ಸಲಹೆಯ ಮೇರೆಗೆ ಯೋಗ್ಯ ಪ್ರಕರಣಗಳಲ್ಲಿ ಮುಳುಗು ಮತ್ತು ಹೋಕು ಬಾಕಿ ಸಾಲವನ್ನು ವಜಾ ಮಾಡಲು ನಿರ್ಧರಿಸುವ ಬಗ್ಗೆ.
17. ಮಂಡಳಿಯು ಶಿಸ್ತಿನ ವಿಚಾರಣೆ ನಡೆಸಿ, ದಂಡನೆಗೆ ಒಳಗಾದ ನೌಕರನ ಅಪೀಲಿನ ಬಗ್ಗೆ ತೀರ್ಮಾನ.
18. ಮಂಡಳಿಯ ನಿರ್ದೇಶಕರನ್ನು ತೆಗೆದು ಹಾಕುವ ಬಗ್ಗೆ.
19. ಪ್ರಕರಣ 37 ರ ಅಡಿಯಲ್ಲಿ ವಿಚಾರಣೆ ವರದಿ ಇದ್ದಲ್ಲಿ ಕೈಗೊಂಡ ಕ್ರಮಗಳ ವರದಿ.
20. ಇತರೆ ಸಹಕಾರಿಗಳಲ್ಲಿ ಹೊಂದಿರುವ ಸದಸ್ಯತ್ವದ ವರದಿ.

Scanned with OKEN Scanner

21. ಪ್ರಕರಣ 14, 15 ಮತ್ತು 16 ರಡಿ ಸೃಜಿಸಿದ ಸಂಸ್ಥೆ ಇದ್ದಲ್ಲಿ, ಅದರ ವಾರ್ಷಿಕ ವರದಿ ಮತ್ತು ಲೆಕ್ಕಗಳ ಪುನರಾವಲೋಕನ.
22. ಮಂಡಳಿಯಿಂದ ಸದಸ್ಯತ್ವ ನಿರಾಕರಿಸಲಾದ ವ್ಯಕ್ತಿಯ ಅಪೀಲು ಇದ್ದಲ್ಲಿ ಅದರ ಪರಿಗಣನೆ.
23. ನಿರ್ದೇಶಕರ ಅಥವಾ ವ್ಯವಸ್ಥಾಪಕ ನಿರ್ದೇಶಕರ ಸಂಬಂಧಿಗಳು ನೇಮಕಗೊಂಡಿದ್ದಲ್ಲಿ ಆ ಪಟ್ಟಿಯ ಪರಿಗಣನೆ.
24. ಬ್ಯಾಂಕಿನ ಉಪವಿಧಿಗಳ ತಿದ್ದುಪಡಿ ಮಾಡುವ ಕುರಿತು.
25. ನಿರ್ದೇಶಕರ ಮತ್ತು ಪದಾಧಿಕಾರಿಗಳ ನಡತೆ ಸಂಹಿತೆಯ ಅನುಮೋದನೆ.
26. ಹಿಂದಿನ ವರ್ಷ ಸದಸ್ಯರನ್ನು ಸೇರಿಸಿಕೊಂಡ ಹಾಗೂ ತೆಗೆದು ಹಾಕಿದ ಬಗ್ಗೆ ಸಂಕ್ಷಿಪ್ತ ವರದಿ.
27. ಹಿಂದಿನ ವರ್ಷ ಬಜೆಟ್‌ಗಿಂತ ಹೆಚ್ಚುವರಿ ಖರ್ಚಾದ ವೆಚ್ಚಕ್ಕೆ ಅನುಮೋದನೆ ಪಡೆಯುವುದು.
28. ಸಿಬ್ಬಂದಿ ವೃಂದ ಬಲ ಮತ್ತು ವೇತನ ಶ್ರೇಣಿಯನ್ನು ಅನುಮೋದಿಸುವುದು.
29. ಪ್ರಸ್ತುತ ವರ್ಷದಲ್ಲಿ ವಿತರಿಸಬೇಕಾದ ಷೇರುಗಳ ಸಂಖ್ಯೆ ನಿರ್ಧರಿಸುವುದು
30. ಸಿಬ್ಬಂದಿ ಸೇವಾ ನಿಯಮಗಳು ಹಾಗೂ ವ್ಯವಹಾರ ನಿಯಮಗಳಿಗೆ ಅನುಮೋದನೆ.
31. ಅಧ್ಯಕ್ಷರ ಅಪ್ಪಣೆ ಮೇರೆಗೆ ಬರಬಹುದಾದ ಇನ್ನಿತರ ವಿಷಯಗಳು.
32. ವಂದನಾರ್ಪಣೆ.

ನಿರ್ದೇಶಕ ಮಂಡಳಿ ಪರವಾಗಿ

ಸ್ಥಳ: ಮಾನ್ವಿ
ದಿನಾಂಕ:04.09.2026

ವ್ಯವಸ್ಥಾಪಕ ನಿರ್ದೇಶಕರು

# ಸೂಚನೆಗಳು

1. ವಾರ್ಷಿಕ ಮಹಾಸಭೆಯಲ್ಲಿ ಸದಸ್ಯರು ಮೇಲ್ಕಾಣಿಸಿದ ವಿಷಯಗಳಲ್ಲದೇ ಇತರೆ ಯಾವುದೇ ವಿಷಯದ ಬಗ್ಗೆ ಚರ್ಚಿಸುವುದಿದ್ದರೆ, ಸರ್ವ ಸದಸ್ಯರ ಸಭೆಗಿಂತ 7 ದಿವಸಗಳ ಮುಂಚಿತವಾಗಿ ಲಿಖಿತ ಅರ್ಜಿಯನ್ನು ವ್ಯವಸ್ಥಾಪಕ ನಿರ್ದೇಶಕರಿಗೆ ಸಲ್ಲಿಸಬೇಕು.
2. ಸನ್ 2025–26ನೇ ಸಾಲಿನ ವಾರ್ಷಿಕ ವರದಿ, ಲೆಕ್ಕಪರಿಶೋಧಿತ ತಖ್ತೆಗಳು, 2026–27ನೇ ಸಾಲಿನ ವಾರ್ಷಿಕ ಬಜೆಟಿನ ವರದಿ ಹಾಗೂ ಹಿಂದಿನ ವಾರ್ಷಿಕ ಮಹಾಸಭೆಯ ಗೊತ್ತುವಳಿ ನಡುವಳಿಕೆಗಳನ್ನು https://mpss.bank.in ವೆಬ್‌ನಲ್ಲಿ ಹಾಕಲಾಗಿದ್ದು ಈ ವೆಬ್ ವಿಳಾಸಕ್ಕೆ ಪ್ರವೇಶ ಮಾಡಿ ಮಾಹಿತಿ ಪಡೆಯಬಹುದಾಗಿರುತ್ತದೆ.
3. ಬ್ಯಾಂಕಿನ ಅಭಿವೃದ್ಧಿ ಕುರಿತು ಸಲಹೆ ಸೂಚನೆಗಳನ್ನು ನೀಡಲು ಸದಸ್ಯರಿಗೆ ಮುಕ್ತ ಅವಕಾಶ ನೀಡಲಾಗುವುದು.

MPS BANK
Promoting Livelihood

ಗೆ,
ಶ್ರೀಮತಿ/ ಶ್ರೀ

Book Post

ಇವರಿಂದ
ಮಾನ್ವಿ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್ ನಿಯಮಿತ., ಮಾನ್ವಿ
ಪ್ರಧಾನ ಕಛೇರಿ : ಅಪರ್ಣ ಚಿತ್ರಮಂದಿರ ಕಾಂಪ್ಲೆಕ್ಸ್, ಮಾನ್ವಿ – 584 123 ಜಿ॥ ರಾಯಚೂರು

ಶ್ರೀನಿಧಿ ಪ್ರಿಂಟರ್ಸ ಅಂ.

Scanned with OKEN Scanner